ಹವ್ಯಾಸಿ(ವಿಲಾಸಿ)ಗಳ ನಾಟಕಗಳೂ ಜನರತ್ತ ಸಾಗಬೇಕೆಂಬ ಧ್ಯೇಯದೊಡನೆ ರಾಯರೇ ಸಮಾನ ಮನಸ್ಕ ಸ್ನೇಹಿತರೊಂದಿಗೆ ಗುಂಪು ಕಟ್ಟಿಕೊಂಡು ನಾಟಕ ಪ್ರದರ್ಶನಕ್ಕೆ ಮೊದಲಿಟ್ಟರು. ಕನ್ನಡದೊಂದಿಗೆ ಹಿಂದಿ, ಮರಾಠಿ ನಾಟಕಗಳ ಅನುವಾದಗಳನ್ನು ರಂಗದ ಮೇಲೆ ತಂದರು. ಆಗ ಎ.ಎನ್. ಮೂರ್ತಿರಾಯರ 'ಆಷಾಢಭೂತಿ', ಅ.ನ.ಕೃ. ಅವರ 'ಮದುವೆಯೋ ಮನೇಹಾಳೋ', ಕೈಲಾಸಂ ಅವರ 'ಅಮ್ಮಾವ್ರ ಗಂಡ' ಮೊದಲಾದ ನಾಟಕಗಳು ಪ್ರಯೋಗವಾದವು. ಜನಮನ್ನಣೆಯನ್ನು ಪಡೆದವು.

ತಮ್ಮ ಅಣ್ಣ ಬಿ.ಎಸ್. ವೆಂಕಟರಾಮ್ ಆರಂಭಿಸಿದ 'ಛಾಯಾ ಕಲಾವಿದರು' ಸೇರಿದ ಅವರು ಹವ್ಯಾಸಿ ರಂಗದ ನಿರಂತರ ಚಟುವಟಿಕೆಗಳನ್ನು ನಡೆಸಿದರು. ಆ ಸಂದರ್ಭದಲ್ಲಿ ಕೈಲಾಸಂ ಹಾಗೂ ಪರ್ವತವಾಣಿ ಅವರ ಅನೇಕ ನಾಟಕಗಳು ಪ್ರದರ್ಶನ ಕಂಡವು. ವಾರ ವಾರವೂ ಹವ್ಯಾಸಿ ನಾಟಕ ಪ್ರಯೋಗಕ್ಕೆ ಕೂಡ ಆಗ ಚಾಲನೆ ಸಿಕ್ಕಿತು. ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿದ್ದ 'ಶ್ರೀಸಾಮಾನ್ಯ ನಾಟಕ ಮಂಡಲಿ' ಥಿಯೇಟರ್ ಅನ್ನು ಬಾಡಿಗೆಗೆ ಪಡೆದು ಪರ್ವತವಾಣಿ ಅವರ 'ಉಂಡಾಡಿ ಗಂಡ', 'ಬಹದ್ದೂರ್ ಗಂಡು' ನಾಟಕಗಳನ್ನು ಪ್ರದರ್ಶಿಸಲಾಯಿತು.

'ಬಹದ್ದೂರ್ ಗಂಡು' ನಾಟಕದ ಭೀಮು ಪಾತ್ರಧಾರಿ ನಾರಾಯಣ ರಾವ್. ಆ ನಾಟಕ ಸತತವಾಗಿ 165 ಪ್ರದರ್ಶನ ಕಂಡಿತು. ಇದು ಹವ್ಯಾಸಿ ನಾಟಕ ರಂಗದಲ್ಲೊಂದು ದಾಖಲೆ. ರಾವ್ ಅಪ್ರತಿಮ ನಟರೆಂಬ ಹೆಗ್ಗಳಿಕೆ ಪಡೆದದ್ದು ಇದೇ ನಾಟಕದಿಂದ.

ದನಿಯ ಮೇಲಿನ ಹಿಡಿತದಿಂದಾಗಿ ಪಾತ್ರಗಳನ್ನು ರಸಪೂರ್ಣವಾಗಿಸಲು ಯತ್ನಿಸುವ ಕೆಲವೇ ನಟರ ಸಾಲಿಗೆ ಸೇರಿದ ರಾಯರು ತಮ್ಮ ಪಾತ್ರಕ್ಕೆ ಖಚಿತ ನಿರೂಪಣೆ ನೀಡುವುದರಲ್ಲೂ ಸಮರ್ಥರಾಗಿದ್ದರು. ಸಾಮಾಜಿಕ, ಐತಿಹಾಸಿಕ, ಸಾಹಿತ್ಯಕ ಪ್ರಧಾನವಾದ ಎಲ್ಲಾ ನಾಟಕಗಳಲ್ಲೂ ಮುಖ್ಯಪಾತ್ರ ಮಾಡಿ ಖ್ಯಾತಿ ಪಡೆದ ಅವರು 'ಕಾಕನಕೋಟೆ'ಯ ಕಾಕನ ಪಾತ್ರದಿಂದ ಮತ್ತಷ್ಟು ಪ್ರಸಿದ್ಧರಾದರು. 'ವಾರ್ಷಿಕೋತ್ಸವ'ದ ಅರೆಹುಚ್ಚಿ ಪಾರ್ವತಮ್ಮ, 'ರಣಧೀರ ಕಂಠೀರವ'ದ ನರಸರಾಜ ಒಡೆಯರ್ ಪಾತ್ರಗಳ ಅಭಿನಯದಿಂದ ಪಳಗಿದ ನಟರೆನ್ನಿಸಿಕೊಂಡರು.

ಕನ್ನಡದಲ್ಲಿ ಹವ್ಯಾಸಿ ರಂಗಕ್ಕೆ ಉತ್ತಮ ಬುನಾದಿ ಹಾಕಿಕೊಟ್ಟ ಈ ನಟ ಚಾರಿತ್ರಿಕ ಪಾತ್ರಗಳಿಗೂ ಹೊಸ ಆಯಾಮ ಕೊಟ್ಟರು. ಸಂಸ, ಕೈಲಾಸಂ, ಮಾಸ್ತಿ, ಶ್ರೀರಂಗ, ಕುವೆಂಪು ಮುಂತಾದವರ ನಾಟಕಗಳಿಗೆ ಶಕ್ತಿ ತುಂಬಿ ರಂಗಕ್ಕೆ ತಂದರು. ನಟರಾಗಿ ಜನಪ್ರಿಯತೆ ಗಳಿಸಿದ ಅವರು ನಾಟಕ ಕಲೆಯ ಗುರುಗಳಾಗಿ ಮಹತ್ವದ ಕೆಲಸ ಮಾಡಿದ್ದು ಹಲವು ಮಹತ್ವದ ನಾಟಕಗಳನ್ನು ಪ್ರಯೋಗಿಸಿ, ಹಲವು ಪ್ರತಿಭಾವಂತರನ್ನು ಬೆಳಕಿಗೆ ತಂದರು. ನಾಲ್ಕು ದಶಕಗಳ ಕಾಲ ಹವ್ಯಾಸಿ ರಂಗದಲ್ಲಿ ಕ್ರಿಯಾಶೀಲರಾಗಿ ಕೆಲಸ ಮಾಡಿದ ನಾರಾಯಣ ರಾವ್ ಚಲನಚಿತ್ರ ರಂಗಕ್ಕೂ ಕಾಲಿಟ್ಟರು. 'ಗೆಜ್ಜೆಪೂಜೆ', 'ಬಿಡುಗಡೆ', 'ಅನಿರೀಕ್ಷಿತ' ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿದರು.

ಆಕಾಶವಾಣಿ ನಾಟಕಗಳಿಂದಲೂ ಹೆಸರು ಮಾಡಿದ ರಾಯರು ದೂರದರ್ಶನ ನಾಟಕಗಳಲ್ಲೂ ಪಾತ್ರ ನಿರ್ವಹಿಸಿದರು. ಧ್ವನಿಯಿಂದಲೇ ಪಾತ್ರಗಳಿಗೆ ಸತ್ವ ಒದಗಿಸಿಕೊಟ್ಟ ನಾರಾಯಣ ರಾವ್ ಆಕಾಶವಾಣಿ ನಾಟಕಗಳಲ್ಲಿ ಮಹತ್ವದ ಕಲಾವಿದರೆನ್ನಿಸಿದರು. ಕರ್ನಾಟಕ ನಾಟಕ ಅಕಾಡೆಮಿ ರಿಜಿಸ್ಟ್ರಾರ್ ಆಗಿ ಕಾರ್ಯ ನಿರ್ವಹಿಸಿದ ನಾರಾಯಣ ರಾವ್ ಅವರಿಗೆ ಸಂಗೀತ–ನಾಟಕ ಅಕಾಡೆಮಿ ಗೌರವ ಪುರಸ್ಕಾರವೂ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ.

ಚಿತ್ರಕೃಪೆ: ಡಿ.ಸಿ. ನಾಗೇಶ್